ಈ) ಸಾಮಾನ್ಯವಾಗಿ ಎಲ್ಲಾ ಕೆರೆಗಳಲ್ಲಿ ಮರಳು ಲಭ್ಯತೆಯಿರುವುದಿಲ್ಲ. ಹೆಚ್ಚಿನ ಕೆರೆಗಳಲ್ಲಿ ಜೇಡುಮಣ್ಣಿನ ಲಭ್ಯತೆಯಿರುತ್ತದೆ. ಕೋಲಾರ ಜಿಲ್ಲೆಯ ಮರಳು ಮಾನಿಟರಿಂಗ್ ಸಮಿತಿಯ ಸಭೆಯಲ್ಲಿ ಇತ್ತೀಚೆಗೆ 2006–07ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸರಾಸರಿ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿರುವುದರಿಂದ ಹಾಗೂ ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಮರಳು ಗಣಿಗಾರಿಕೆಗೆ ಆಕ್ಷೇಪಣೆಗಳಿರುವುದರಿಂದ, ಸಧ್ಯಕ್ಕೆ ಜಿಲ್ಲೆಯಲ್ಲಿ ಕೆರೆಗಳಲ್ಲಿ ಹಾಗೂ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆಗೆ ನಿರ್ಬಂಧ ವಿಧಿಸಲಾಗಿರುತ್ತದೆ.

1482 (1896) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ಬೆಳವಾಗು–ಅರೂಡಿ, ಬೆಳವಾಗು–ಕನಕವಾಡಿ, ಗುಂಡಂಗೆರೆ–ಹೊಸಹಳ್ಳಿ, ಕೊಡಿಗೇಹಳ್ಳಿ, ಕನಕೇನಹಳ್ಳಿ ಈ ನಾಲ್ಕು ಲೋಕೋಪಯೋಗಿ ಇಲಾಖೆಯ ರಸ್ತೆಗಳು ಅಸ್ತಿತ್ವದಲ್ಲಿ ಇವೆಯೇ;

ಆ) ಹಾಗಿದ್ದಲ್ಲಿ, ಇದರ ನಿರ್ವಹಣೆ ಮತ್ತು ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಈ ಕಾಮಗಾರಿಗೆ ಬಿಡುಗಡೆ ಮಾಡಲಾದ ಹಣವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಪ್ರಸ್ತಾಪಿಸಿರುವ ಪ್ರಶ್ನೆಯ ಸರಿಯಾದ ರಸ್ತೆಗಳ ನಾಮಾಂಕಿತ ಹೀಗಿರುತ್ತದೆ.

ಬೆಳವಂಗಲ	–	ಅರೂಡಿ
ಬೆಳವಂಗಲ	–	ಕನಸವಾಡಿ
ಗುಂಡಂಗೆರೆ	–	ಹೊಸಹಳ್ಳಿ
ಕೊಡಿಗೇಹಳ್ಳಿ	–	ಕನಕೇನಹಳ್ಳಿ

ಈ ನಾಲ್ಕೂ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಗಳೆಂದು ವರ್ಗೀಕೃತಗೊಂಡಿದ್ದು, ಲೋಕೋಪಯೋಗಿ ಇಲಾಖೆಯ ಅಸ್ತಿತ್ವದಲ್ಲಿ ಇರುತ್ತದೆ.

ಆ) ಈ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ.

ಇ) ಪ್ರಸ್ತುತ ಸಾಲಿಗೆ ರೂ.2.09 ಲಕ್ಷ ಬಿಡುಗಡೆಯಾಗಿದೆ.

1483 (2200) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಕ್ಷೇತ್ರ ವ್ಯಾಪ್ತಿಯಲ್ಲಿರುವ ಮಸೀದಿ, ಅದರ ಕಂಪೌಂಡ ಈದಗಾ ಮತ್ತು ಸ್ಮಶಾನದ ಕಂಪೌಂಡಗಳ ಅಭಿವೃದ್ಧಿಯಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವ ಅವಧಿಯೊಳಗಾಗಿ ಅಭಿವೃದ್ಧಿಪಡಿಸಲಾಗುವುದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಹೌದು; ಕುಣಿಗಲ್ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮಸೀದಿ, ಅದರ ಕಂಪೌಂಡ ಈದಗಾ ಮತ್ತು ಸ್ಮಶಾನದ ಕಂಪೌಂಡಗಳ ಅಭಿವೃದ್ಧಿಗಾಗಿ ಈ ಕೆಳಕಂಡಂತೆ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ವಿವರ.

ಕ್ರಮ.ಸಂ	ವಕ್ಫ ಸಂಸ್ಥೆಯ ಹೆಸರು	ಮೊತ್ತ ರೂ.ಗಳಲ್ಲಿ
1	ಜಾಮಿಯಾ ಮಸೀದಿ, ಸಬಗನಹಳ್ಳಿ, ಕೊಟಗೆರೆ ಕುಣಿಗಲ್ ತಾಲ್ಲೂಕು– ಮಸೀದಿ ಕಟ್ಟಡಕ್ಕಾಗಿ	20,000–00
2	ಅಹಲಿ ಸುನ್ನತುಲ ಮಸೀದಿ,	20,000–00